# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 03 ಪ್ರಾ.ಸಾ. : 05**

ಸಾಕ್ಷಿಯ ಹೆಸರು : ರಮೇಶ ರಾಜು ಪುನ್ನಾ
ತಂದೆಯ ಹೆಸರು : ರಾಜು ಪುನ್ನಾ
ವಯಸ್ಸು : 41 ವರ್ಷ
ಕೆಲಸ : ಇಲೆಕ್ಟ್ರಿಕಲ್ ಕೆಲಸ
ವಾಸ : ರಾಜೀವನಗರ, ಕದ್ರಾ, ಕಾರವಾರ

**ದಿನಾಂಕಃ 14-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 15.02.2014 ರಂದು ಪೋಲಿಸರು ನನ್ನನ್ನು ರಾಜೀವ ನಗರದ ಮೃತ ವೇಲು ಇಲ್ಲನ್ ಗುಡಿ ಯ ಮನೆಯಲ್ಲಿ ಕೊಲೆಯಾಗಿದೆ ಎಂದು ಹೇಳಿ, ಪಂಚನಾಮೆಗೆ ಕರೆಸಿದ್ದರು. ಅದರಂತೆ ನಾನು ಬೆಳಗ್ಗೆ 7.30 ಸುಮಾರಿಗೆ ಮೃತ ವೇಲು ಇಲ್ಲನ್ ಗುಡಿ ಯ ಮನೆಯ ಬಳಿ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ, ಚಾಸಾ-1, ಚಾಸಾ-4 ಮತ್ತು ಚಾಸಾ-2 ರವರು ಹಾಜರಿದ್ದರು. ಮೃತ ವೇಲು ಇಲ್ಲನ್ ಗುಡಿ ರವರ ಮನೆಯ ಮೇಲ್ಛಾವಣಿಗೆ ಸಿಮೆಂಟ್ ಶೀಟ್ ನ್ನು ಹಾಕಲಾಗಿತ್ತು, ಗೋಡೆಯನ್ನು ಚಿರೇ ಕಲ್ಲಿನಿಂದ ಕಟ್ಟಲಾಗಿತ್ತು ಮತ್ತು ಮನೆಯು ಸಿಮೆಂಟ್ ನೆಲವಾಗಿತ್ತು. ಪೊಲೀಸರಿಗೆ ಚಾಸಾ-1 ರವರು ಸ್ಥಳ ತೋರಿಸಿದರು. ಮನೆಯ ಪಕ್ಕದಲ್ಲಿದ್ದ ವಿದ್ಯುತ್ ಕಂಬದಿಂದ, ಮನೆಗೆ ವಿದ್ಯುತ್ ಸಂಪರ್ಕ ನೀಡಿದ್ದ ತಂತಿಯನ್ನು ಕತ್ತಿರಿಸಲಾಗಿತ್ತು. ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಸ್ವಿಚ್ ಬಟನ್ ಗಳು ಆನ್ ಆಗಿದ್ದವು, ಆದರೆ ವಿದ್ಯುತ್ ಸಂಪರ್ಕ ಇರಲಿಲ್ಲ. ಸದರಿ ಮನೆಯಲ್ಲಿ ಒಟ್ಟು 4 ಕೋಣೆಗಳು ಇದ್ದವು. ಮನೆಯ ಹಾಲ್ ನಲ್ಲಿ ಅಶ್ವಿನಿಯ ಶವ ಬಿದ್ದಿತ್ತು, ಶವದ ಕುತ್ತಿಗೆಯ ಹತ್ತಿರ ಯಾವುದೋ ಹರಿತವಾದ ಆಯುಧದಿಂದ ಕತ್ತರಿಸಿದ ಗಾಯವಾಗಿ ಮೃತ ಪಟ್ಟಿದ್ದಳು ಹಾಗೂ ಆಕೆ ಫ್ರಾಕ್ ನ್ನು ಧರಿಸಿದ್ದಳು ಹಾಗೂ ಸದರಿ ಫ್ರಾಕ್ ಗೆ ರಕ್ತ ತಾಗಿತ್ತು ಮತ್ತು ನೆಲದ ಮೇಲೆ ರಕ್ತ ಹರಡಿಕೊಂಡಿತ್ತು ಹಾಗೂ ಅಲ್ಲಲ್ಲಿ ರಕ್ತ ಚಿಮ್ಮಿತ್ತು. ಪೋಲಿಸರು ಸ್ಥಳದಲ್ಲಿ ರಕ್ತ ತಾಗಿದ ಸಿಮೆಂಟ್

ನೆಲದ ಚೂರು ಹಾಗೂ ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ಕೆರೆದು ಜಪ್ತುಪಡಿಸಿ, ಪ್ಲಾಸ್ಟಿಕ್ ಚೀಲದಲ್ಲಿ ಹಾಕಿಕೊಂಡರು ಹಾಗೂ ಅವುಗಳಿಗೆ 1 ಮತ್ತು 2 ಎಂದು ಗುರುತು ಮಾಡಿಕೊಂಡರು ಹಾಗೂ ನಮ್ಮ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ರಕ್ತ ತಾಗಿದ ಸಿಮೆಂಟ್ ನೆಲದ ಚೂರನ್ನು ಹಾಗೂ ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮುದ್ದೆ ಮಾಲು– 1 ಮತ್ತು 2 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು– 1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು.

2. ಮನೆಯ ಹಾಲ್ ನ ಪಕ್ಕದಲ್ಲಿ ಇದ್ದ ಬೆಡ್ ರೂಮ್ ನ್ನು ಚಾಸಾ–1 ರವರು ತೋರಿಸಿ, ವೇಲುವಿನ ಹೆಂಡತಿ ಜಾನಕಿ ಇದೇ ಸ್ಥಳದಲ್ಲಿ ಬಿದ್ದಿದ್ದಳು ಹಾಗೂ ಅವಳ ಕೈ ಕತ್ತರಿಸಲಾಗಿತ್ತು, ತಲೆಗೆ ಏಟಾಗಿತ್ತು, ಸ್ಥಳದಲ್ಲಿ ರಕ್ತ ಬಿದ್ದಿತ್ತು ಎಂದು ತೋರಿಸಿದರು. ನಂತರ ಮನೆಯ ಕೋಣೆಯ ಒಳಗೆ ರಕ್ತ ತಾಗಿದ ಪಾದದ ಗುರುತು ಇತ್ತು. ಅಲ್ಲಿ ಪೋಲಿಸರು ರಕ್ತ ತಾಗಿದ ಮತ್ತು ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ಕೆರೆದು ಜಪ್ತುಪಡಿಸಿಕೊಂಡು ಹಾಗೂ ಅವುಗಳಿಗೆ 3 ಮತ್ತು 4 ಎಂದು ಗುರುತು ಮಾಡಿಕೊಂಡರು ಹಾಗೂ ನಮ್ಮ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ರಕ್ತ ತಾಗಿದ ರೂಮ್ ನ ಸಿಮೆಂಟ್ ನೆಲದ ಚೂರು ಹಾಗೂ ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು– 3 ಮತ್ತು 4 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು– 3(ಬಿ) ಮತ್ತು 4(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೊಲೀಸರು ಬೆಳಗ್ಗೆ 7.35 ರಿಂದ 8.35 ರವರೆಗೆ ಪಂಚನಾಮೆಯನ್ನು ಬರೆದರು.

3. ಮೃತ ವೇಲು ಇಲ್ಲನ್ ಗುಡಿಯ ಮನೆಯಿಂದ 30 ಮೀಟರ್ ಅಂತರದಲ್ಲಿ ಕೊಡ್ಸಳ್ಳಿ ಡ್ಯಾಂ ಕಡೆಗೆ ಹೋಗುವ ರಸ್ತೆಯಿಂದ ಕಾಲುವೆ ಕಡೆಗೆ ಹೋಗುವ ರಸ್ತೆಯಲ್ಲಿ ಚಾಸಾ–1 ರವರು ಮೃತ ವೇಲು ಇಲ್ಲನ್ ಗುಡಿ ಹಾಗೂ ಆತನ ಮಗನಾದ ಸತ್ಯನಾರಾಯಣ ಮೂರ್ತಿಯವರ ಶವವನ್ನು ತೋರಿಸಿದ್ದು, 2 ಶವಗಳು 8 ಅಡಿ ಅಂತರದಲ್ಲಿ ಬಿದ್ದಿರುತ್ತವೆ. ಸತ್ಯನಾರಾಯಣ ಮೂರ್ತಿಯ ಶವ ನೋಡಿದಾಗ, ಶವದ ಕುತ್ತಿಗೆಯ ಬಳಿ ಕತ್ತಿಯಿಂದ ಹೊಡೆದ ಗಾಯವಾಗಿ ಮೃತಪಟ್ಟಿರುತ್ತಾನೆ, ನೆಲದ ಮೇಲೆ ಹಾಗೂ ಸುತ್ತಮುತ್ತಲಿನ ಎಲೆಗಳ ಮೇಲೆ ರಕ್ತ ಚೆಲ್ಲಿತ್ತು. ಪೋಲಿಸರು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ಮತ್ತು ರಕ್ತ ಮಿಶ್ರಿತ

ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಜಪ್ತುಪಡಿಸಿಕೊಂಡು, ಎಲೆಗಳನ್ನು ಡಬ್ಬಿಯಲ್ಲಿ ಹಾಗೂ ಮಣ್ಣನ್ನು ಪ್ಲಾಸ್ಕಿಟ್ ಕವರ್ ಗಳಲ್ಲಿ ಹಾಕಿ, ಸೀಲು ಮಾಡಿ, ಅವುಗಳಿಗೆ 5 ರಿಂದ 8 ಎಂದು ಗುರುತು ಮಾಡಿಕೊಂಡು, ನಮ್ಮ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 5 ಮತ್ತು 6 ಎಂದು, ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 7 ಮತ್ತು 8 ಎಂದು ಗುರುತಿಸಲಾಗಿದ್ದು, ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು.ಮಾ 5(ಬಿ), ಯಿಂದ 8(ಬಿ) ಎಂದು ಗುರುತಿಸಲಾಯಿತು.

4. ಸತ್ಯನಾರಾಯಣ ಮೂರ್ತಿ ಶವ ಬಿದ್ದ ಸ್ಥಳದಿಂದ 8 ಅಡಿ ಅಂತರದಲ್ಲಿ ವೇಲು ಇಲ್ಲನ್ ಗುಡಿಯ ರವರ ಶವ ಬಿದ್ದಿತ್ತು. ಶವದ ಕುತ್ತಿಗೆ, ಕೈ, ಬೆನ್ನಿನ ಮೇಲೆ ಹರಿತವಾದ ಆಯುಧದಿಂದ ಕತ್ತರಿಸಿದ ಗಾಯಗಳಾಗಿದ್ದವು. ಶವ ಬಿದ್ದ ಸ್ಥಳದಲ್ಲಿ ಹಾಗೂ ಸುತ್ತ ಮುತ್ತ ಬಿದ್ದಂತಹ ಎಲೆಗಳ ಮೇಲೆ ರಕ್ತ ಚಲ್ಲಿತ್ತು. ಪೋಲಿಸರು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ಮತ್ತು ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಜಪ್ತುಪಡಿಸಿಕೊಂಡು, ಎಲೆಗಳನ್ನು ಡಬ್ಬಿಯಲ್ಲಿ ಹಾಗೂ ಮಣ್ಣನ್ನು ಪ್ಲಾಸ್ಕಿಟ್ ಕವರ್ ಗಳಲ್ಲಿ ಹಾಕಿ, ಸೀಲು ಮಾಡಿ, ಅವುಗಳಿಗೆ 9 ರಿಂದ 12 ಎಂದು ಗುರುತು ಮಾಡಿಕೊಂಡು, ನಮ್ಮ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 9 ಮತ್ತು 10 ಎಂದು, ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 11 ಮತ್ತು 12 ಎಂದು ಗುರುತಿಸಲಾಗಿದ್ದು, ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು.ಮಾ 9(ಬಿ), ಯಿಂದ 12(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೊಲೀಸರು ಬೆಳಗ್ಗೆ 08-40 ರಿಂದ 10-00 ಗಂಟೆಯ ವರೆಗೆ ಪಂಚನಾಮೆಯನ್ನು ಬರೆದು, ನಮ್ಮ ಸಹಿಯನ್ನು ಪಡೆದುಕೊಂಡರು ಹಾಗೂ ಪೋಟೋವನ್ನು ತೆಗೆದರು. ಮೃತ ವೇಲು ಇಲ್ಲನ್ ಗುಡಿ ಅಂಗವಿಕಲನಾದ ಕಾರಣ ಆತನ ಶವದ ಪಕ್ಕದಲ್ಲಿ ಅಲ್ಯುಮೀನಿಯಮ್ ಊರಗೋಲುಗಳು ಬಿದ್ದಿದ್ದವು, ಅವುಗಳನ್ನು ಪೋಲಿಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು. ಅವುಗಳನ್ನು ಈಗಾಗಲೇ ಮುದ್ದೆ ಮಾಲು-13 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು

ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಒಟ್ಟು 14 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-3 ರಿಂದ 16 ಎಂದು ಗುರುತಿಸಲಾಗಿರುತ್ತದೆ.

5. ನಾನು ಶವವನ್ನು ಮೃತೆ ಅಶ್ವಿನಿಯವರ ಮೈ ಮೇಲೆ ಫ್ರಾಕ್, ಪೆಟಿಕೋಟ್, ಚಡ್ಡಿ ಇತ್ತು, ಫ್ರಾಕ್, ಪೆಟಿಕೋಟ್ ಮತ್ತು ಚಡ್ಡಿಯನ್ನು ಈಗಾಗಲೇ ಮುದ್ದೆ ಮಾಲು-14 ರಿಂದ 16 ಎಂದು ಗುರುತಿಸಲಾಗಿರುತ್ತದೆ, ಮೃತ ಸತ್ಯನಾರಾಯಣ ಮೂರ್ತಿ ಶವದ ಮೇಲೆ ನೀಲಿ ಬಣ್ಣದ ಅಂಗಿ, ಮತ್ತು ಚಡ್ಡಿ ಇದ್ದವು. ಅವುಗಳನ್ನು ಈಗಾಗಲೇ ಮುದ್ದೆ ಮಾಲು-17 ಮತ್ತು 18 ಎಂದು ಗುರುತಿಸಲಾಗಿರುತ್ತದೆ, ಮೃತ ವೇಲು ಇಲ್ಲನ್ ಗುಡಿಯ ಶವದ ಮೇಲೆ ಪೂರ್ಣ ತೋಳಿನ ಶರ್ಟ, ಬಿಳಿ ಬಣ್ಣದ ಲುಂಗಿ ಮತ್ತು ಒಂದು ಚಡ್ಡಿ ಇದ್ದವು. ಅವುಗಳನ್ನು ಈಗಾಗಲೇ ಮುದ್ದೆ ಮಾಲು-19 ರಿಂದ 21 ಎಂದು ಗುರುತಿಸಲಾಗಿರುತ್ತದೆ. ಮುದ್ದೆಮಾಲು-14 ರಿಂದ 21 ಬಟ್ಟೆಗಳಿಗೆ ರಕ್ತ ತಾಗಿತ್ತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

6. ಮೃತ ವೇಲು ಮತ್ತು ಅವರ ಕುಟುಂಬದ ಜೊತೆ ನನಗೆ 8 ವರ್ಷಗಳಿಂದ ಪರಿಚಯ ಇರುತ್ತದೆ. ಮೃತ ವೇಲು ರವರ ಹೆಂಡತಿ ಜಾನಕಿ ನನ್ನ ಸಂಬಂಧಿಕರಲ್ಲ. ನಮ್ಮ ಮನೆಯ ಹಿಂದುಗಡೆ 20 ಮೀಟರ ದೂರದಲ್ಲಿ ಮೃತ ವೇಲು ರವರ ಮನೆಯಿರುತ್ತದೆ. ವೇಲು ರವರ ಮನೆಯ ಪಕ್ಕದಲ್ಲಿ ಕವಿತಾ ಎನ್ನುವರ ಮನೆ ಇರುತ್ತದೆ. ಜಾನಕಿ ಮತ್ತು ಚಾಸಾ-4 ಧನಲಕ್ಷ್ಮಿ ಸಂಬಂಧಿಕರು ಎಂದರೆ ಸರಿಯಲ್ಲ. ವೇಲು ಹಾಗೂ ಆತನ ಮಕ್ಕಳು ಕೊಲೆಯಾದ ಬಗ್ಗೆ ಜನರು ಸೇರಿದ್ದರಿಂದ, ಆ ದಿನ ಬೆಳಿಗ್ಗೆ ನನಗೆ ತಿಳಿಯಿತು. ಕೊಲೆಯಾದ ನಂತರದಲ್ಲಿ ಅವರ ಮನೆಯ ಹತ್ತಿರ ಹಾಗೂ ವೇಲು ಶವ ಬಿದ್ದ ಸ್ಥಳದಲ್ಲಿ ಊರಿನ ಜನರು ಸೇರಿದ್ದರು. ಶವವಗಳನ್ನು ಮೊದಲು ಯಾರು ನೋಡಿದರು ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿ ಶವಗಳನ್ನು ನೋಡುವ ಮೊದಲೇ ಬಹಳಷ್ಟು ಜನರು ಹೋಗಿ ನೋಡಿದ್ದರು ಹಾಗೂ ಸ್ಥಳದಲ್ಲಿ 3-4 ಮಂದಿ ಪೊಲೀಸರು ಇದ್ದರು. ಪೊಲೀಸರು ಪಂಚನಾಮೆಗೆ ಎಷ್ಟು ಜನರನ್ನು ಕರೆದಿದ್ದರು ಎಂದು ನನಗೆ ಗೊತ್ತಿಲ್ಲ.

7. ಪೊಲೀಸರು ಎಷ್ಟು ದಾಖಲೆಗಳ ಮೇಲೆ ಸಹಿ ಪಡೆದುಕೊಂಡರು ಎಂದು ನನಗೆ ಈಗ ನೆನಪಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ ಸ್ಥಳದಲ್ಲಿ ನಾನು ಸಹಿ ಮಾಡಿರುತ್ತೇನೆ. ಚಾಸಾ–2 ಮತ್ತು 4 ರವರನ್ನು ಯಾವಾಗ ಕರೆದರು ಹಾಗೂ ಯಾವ ದಾಖಲೆಯ ಮೇಲೆ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಿಪಿ–1 ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ–1 ಪಂಚನಾಮೆಯ ಯಾವ ಪ್ಯಾರಾದಲ್ಲಿ ಚೆಕ್ ಬಂದಿ ಯನ್ನು ನಮೂದಿಸಿದ್ದಾರೆ ಎಂದು ನನಗೆ ನೆನಪಿಲ್ಲ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯ ಮೇಲೆ ನನ್ನ ಸಹಿಯನ್ನು ಪಡೆದುಕೊಳ್ಳುವ ಸಮಯದಲ್ಲಿ, ಕೆಲವು ಚೀಟಿಗಳ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡಿದ್ದರು. ಪಂಚನಾಮೆಯ ಸಮಯದಲ್ಲಿ ನನ್ನ ಸಹಿಯನ್ನು ಪಡೆದುಕೊಳ್ಳುವ ಕಾಲಕ್ಕೆ ಮುದ್ದೆ ಮಾಲುಗಳನ್ನು ಸೀಲ್ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ನಾನು ಸಹಿ ಮಾಡಿದ ಚೀಟಿಗಳನ್ನು ಯಾವ ಕಾರಣಕ್ಕಾಗಿ ಪಡೆದರು ಎಂದು ನನಗೆ ನೆನಪಿಲ್ಲ. ನಿಪಿ–4 ರಿಂದ 6 ಪೋಟೋಗಳಲ್ಲಿ ಪೊಲೀಸರು ನನಗೆ ಇದೇ ರೀತಿ ನಿಲ್ಲಬೇಕೆಂದು ಹೇಳಿತ್ತಾರೆ ಎಂದರೆ ಸರಿ. ನಿಪಿ–3 ರಿಂದ 16 ಪೋಟೋಗಳನ್ನು ಯಾವಾಗ ತೆಗೆದರು ಎಂದು ನನಗೆ ನೆನಪಿಲ್ಲ. ನಾನು ಯಾವುದೇ ಪಂಚನಾಮೆಗೆ ಹಾಜರಾಗಿರುವುದಿಲ್ಲ ಹಾಗೂ ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ನನಗೆ ನೆನಪಿಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದು ಸುಮಾರು 14 ವರ್ಷಗಳು ಆದ ಕಾರಣ ನನಗೆ ನೆನಪು ಬರುತ್ತಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ